# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 85 | Pages. 2 | Date: 03-03-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 85 - ಪುಟಗಳು : 2 | 03-03-2026 | ಮಂಗಳವಾರ | Ph: 8762954248 | ದರ : ₹1


# ಅನಾಹುತ ಸಂಭವಿಸಿದರೆ ಡಿಸಿ-ಎಸಿ ಹೊಣೆ: ಹೆಚ್.ಡಿ. ರೇವಣ್ಣ

## ಹೊ.ನ.ಪುರ ಲಕ್ಷ್ಮೀನರಸಿಂಹ ರಥೋತ್ಸವದಲ್ಲಿ ರಾಜಕೀಯ | ಬಿಗುವಿನ ವಾತಾವರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಂಗಳವಾರ ನಡೆಯಲಿರುವ ಹೊಳೆನರಸೀಪುರದ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ವಸ್ತ್ರದ ವಿಚಾರವಾಗಿ ರಾಜಕೀಯ ಸ್ವರೂಪ ಪಡೆದಿದ್ದು ಜಿಲ್ಲಾಡಳಿತವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ರಥಕ್ಕೆ ಹಾಕುವ ವಸ್ತ್ರದ ವಿಚಾರ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗೂ ಸಂಸದ ಶ್ರೇಯಸ್ ಪಟೇಲ್ ನಡುವೆ ವಾಗ್ವಾದ ಶುರುವಾಗಿದೆ. ಸೋಮವಾರ ತಾರಕಕ್ಕೇರಿದ ಪ್ರಹಸನ ಗೊಂದಲಕ್ಕೆ ಎಡೆಮಾಡಿಕೊಟ್ಟಿತು. ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು.

ಈ ಬಗ್ಗೆ ಹಾಸನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು, ಜಾತ್ರೆ ವೇಳೆ ಏನಾದರೂ ಅನಾಹುತ ಸಂಭವಿಸಿದರೆ ಜಿಲ್ಲಾಧಿಕಾರಿ ಹಾಗೂ ಹೊಳೆನರಸೀಪುರ ತಹಶೀಲ್ದಾರ್ ಹೊಣೆಗಾರರು ಎಂದು ಎಚ್ಚರಿಕೆ ನೀಡಿದರು.

ಜಾತ್ರೆ ವೇಳೆ ಕಳೆದ 30 ವರ್ಷಗಳಿಂದಲೂ ನಾನು ಪ್ರಸಾದ ವ್ಯವಸ್ಥೆ ಮಾಡುತ್ತಿದ್ದೆ. ಕಾಂಗ್ರೆಸ್ ಸರ್ಕಾರ ಬಂದ ನಂತರ ನಾನು ಪ್ರಸಾದ ನೀಡುವುದು ಬೇಡವೆಂದು ವಿವಾದ ಸೃಷ್ಟಿಸಲಾಯಿತು. ಈಗ ಮುಜರಾಯಿ ಇಲಾಖೆಯಿಂದಲೇ ಪ್ರಸಾದ ನೀಡಲಾಗುತ್ತಿದೆ. ಈ ವರ್ಷ ರಥೋತ್ಸವದ ಪೂರ್ವಭಾವಿ ಸಭೆಗಳು ನಡೆದಾಗ ರಥಕ್ಕೆ ಹಳೆ ಬಟ್ಟೆ ತೆಗೆದು ಹೊಸ ಬಟ್ಟೆ ಹೊದಿಸುವ ಯಾವುದೇ ತೀರ್ಮಾನ ಆಗಿರಲಿಲ್ಲ. ಆದರೆ, ಯಾರೋ ಒಬ್ಬರು ಹೊಸ ಬಟ್ಟೆ ಕೊಡಿಸುವುದಾಗಿ ಹೇಳಿದರೆಂದು ದಿಢೀರನೆ ಹೊಸ ಬಟ್ಟೆ ಹೊದಿಸುವ ತೀರ್ಮಾನ ಮಾಡಲಾಗಿದೆಯಂತೆ. ಅದಕ್ಕೆ ನನ್ನ ವಿರೋಧವಿದೆ. ಹಾಗಿದ್ದರೆ ನಾನೇ 2 ಲಕ್ಷ ರೂ. ಖರ್ಚು ಮಾಡಿ ಹೊಸ ಬಟ್ಟೆ ಕೊಡಿಸುತ್ತಿದ್ದೆ. ಯಾರದೂ ಬೇಡ ಭಕ್ತರ ಕಾಣಿಕೆಯಿಂದ ಬಂದ ಹಣದಲ್ಲಿ ಮುಂದಿನ ವರ್ಷ ಹೊಸ ಬಟ್ಟೆ ಹೊದಿಸೋಣ. ಈ ವರ್ಷ ಹಳೆ ಬಟ್ಟೆಗಳನ್ನೇ ಹೊದಿಸಿ ರಥೋತ್ಸವ ನಡೆಸಲಿ ಎಂದರು.



### ಅಧಿಕಾರಿಗಳ ನಿರ್ಧಾರಕ್ಕೆ ಬದ್ಧ: ಸಂಸದ ಶ್ರೇಯಸ್

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ರಥೋತ್ಸವ ಸಂಬಂಧ ಜಿಲ್ಲಾಡಳಿತ ಕೈಗೊಳ್ಳುವ ನಿರ್ಣಯಕ್ಕೆ ನನ್ನ ಸಹಮತವಿದೆ. ರಥಕ್ಕೆ ತೊಡಿಸುವ ಹೊಸ ಬಟ್ಟೆಗೆ ನಾನು ದೇಣಿಗೆ ನೀಡಿದ ನಂತರ ಸಮಸ್ಯೆ ಉಲ್ಬಣವಾಗಿದೆ. ನಾನು ನೀಡಿದ ದೇಣಿಗೆ ವಾಪಾಸ್ ಕೊಡಿ, ರಥೋತ್ಸವಕ್ಕೆ ಸಮಸ್ಯೆಯಾಗದಂತೆ ಜಾತ್ರೆ ಮಾಡೋಣ ಎಂದರು.

ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಬೇಕೆನ್ನುವುದು ನಮ್ಮ ಉದ್ದೇಶ. ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು.

### ನನ್ನನ್ನು ಅರೆಸ್ಟ್ ಮಾಡಿ ನೋಡ್ತಿನಿ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ರೇಣುಕುಮಾರ್ ವಿರುದ್ಧ ಕಿಡಿಕಾರಿದರು. ಜಿಲ್ಲಾಧಿಕಾರಿ ನಡೆಸಿದ ಸಭೆಗೆ ಶಾಸಕರನ್ನು ಆಹ್ವಾನಿಸಬೇಕಿತ್ತು. ನನ್ನ ಉಪಸ್ಥಿತಿ ಇಲ್ಲದೆ ಅದು ಹೇಗೆ ನಿರ್ಣಯ ಕೈಗೊಳ್ಳಲು ಸಾಧ್ಯ. ಶಾಸಕರನ್ನ ನಿಮ್ಮ ಗುಲಾಮರೆಂದು ತಿಳಿದಿದ್ದೀರಾ. ನಾನು ಸಾಕಷ್ಟು ಜಿಲ್ಲಾಧಿಕಾರಿಗಳನ್ನು ನೋಡಿದ್ದೇನೆ. ಇಂತವರ ಆಟಗಳೆಲ್ಲಾ ನನ್ನ ಮುಂದೆ ನಡೆಯುವುದಿಲ್ಲ. ನೀವು ನಡೆಸುವ ಶಾಂತಿ ಸಭೆಗೆ ನಾವು ಯಾವ ಕಾರಣಕ್ಕೂ ಬರುವುದಿಲ್ಲ. ಬೇಕಿದ್ದರೆ ನನ್ನನ್ನು ಬಂಧಿಸಿ ಎಂದು ಉಪವಿಭಾಗಾಧಿಕಾರಿಗೆ ಮಾರುತ್ತರ ನೀಡಿದರು.

ಜಿಲ್ಲಾಡಳಿತ ನಿರ್ದೇಶನದಂತೆ ರಥಕ್ಕೆ ತೊಡಿಸಿದ್ದ ವಸ್ತ್ರ ತೆಗೆಯಲಾಗಿದೆ ಎಂದು ಹೇಳುತ್ತೀರಿ, ನೀವು ಶಾಸಕರಿಗೆ ಏನು ಗೌರವ ಕೊಟ್ಟಂತಾಯಿತು. ತಾಲ್ಲೂಕು ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ರಥಕ್ಕೆ ಬಟ್ಟೆ ತೊಡಿಸಿದ್ದೀರಿ, ಆದರೆ ಮತ್ತೆ ಬಟ್ಟೆ ಬಿಚ್ಚಿದ್ದೀರಿ, ಇದು ಎಷ್ಟು ಸರಿ. ಯಾವುದೇ ಅಹಿತಕರ ಘಟನೆ ನಡೆದರೆ ನೀವೇ ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಹೊರತಾದ ಯಾವುದಾದರೂ ನಿರ್ಧಾರವನ್ನು ತಾಲ್ಲೂಕು ಹಾಗೂ ಜಿಲ್ಲಾಡಳಿತ ಕೈಗೊಂಡು ರಥೋತ್ಸವದ ವೇಳೆ ಏನಾದರೂ ಅಹಿತಕರ ಘಟನೆಗಳು ನಡೆದರೆ ಅದಕ್ಕೆ ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿ ಹೊಣೆಯಾಗಬೇಕಾಗುತ್ತದೆ ಎಂದರು.

#### ಗಂಭೀರ ಸ್ವರೂಪದ ಸುಳಿವು ಇರಲಿಲ್ಲ: ಡಿಸಿ

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಲಕ್ಷ್ಮೀ ನರಸಿಂಹಸ್ವಾಮಿ ಜಾತ್ರಾ ಮಹೋತ್ಸವ ಮಾ. 3ರ ಮಂಗಳವಾರ ನಡೆಯಲಿದ್ದು, ಕಾನೂನು ಪಾಲನೆ ನಮ್ಮ ಆದ್ಯತೆ ಎಂದು ಪ್ರತಿಕ್ರಿಯಿಸಿದರು.

ರಥಕ್ಕೆ ಬಟ್ಟೆ ಹಾಕುವ ವಿಚಾರವಾಗಿ ಗೊಂದಲ ಉಂಟಾಗಿದೆ. ಅಲಂಕಾರ ವಿಷಯ ಇಷ್ಟು ಗಂಭೀರ ಸ್ವರೂಪ ಪಡೆಯುತ್ತದೆಂದು ನಾವು ಭಾವಿಸಿರಲಿಲ್ಲ. ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದೆ. ಕಾನೂನು ಪ್ರಕಾರವೇ ಎಲ್ಲಾ ಪ್ರಕ್ರಿಯೆ ನಡೆಯಲಿದೆ. ಈ ಹಿಂದೆಯೇ ತಹಶೀಲ್ದಾರ್ ಹಾಗೂ ಕ್ಷೇತ್ರ ಶಾಸಕರ ನೇತೃತ್ವದಲ್ಲಿ ಸಭೆ ನಡೆದಿದೆ. ಆದರೂ ಸಮಸ್ಯೆ ಬಗೆಹರಿದಿಲ್ಲ ಎಂದರು.

#### ಶಾಂತಿ ಸಭೆ ವಿಫಲ

ಜಿಲ್ಲಾಡಳಿತದ ನಿರ್ದೇಶನದಂತೆ ರಥಕ್ಕೆ ತೊಡಿಸಿದ್ದ ವಸ್ತ್ರವನ್ನು ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ತೆಗೆಸಿದರು. ಅದಕ್ಕೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗೂ ಬೆಂಬಲಿಗರು ಅಧಿಕಾರಿಗಳ ಮೇಲೆ ಮುಗಿಬಿದ್ದರು. ಪಟ್ಟಣದಲ್ಲಿ ಪರಿಸ್ಥಿತಿ ಬಿಗಡಾಯಿಸುವ ಸೂಚನೆ ಅರಿತ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು, ಉಪವಿಭಾಗಾಧಿಕಾರಿ ಹಾಗು ಹೆಚ್ಚುವರಿ ಪೊಲೀಸರನ್ನು ಕಳುಹಿಸಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸಿದರು. ಆದರೆ ಶಾಂತಿ ಸಭೆಗೆ ರೇವಣ್ಣ ಹಾಜರಾಗದ ಹಿನ್ನೆಲೆಯಲ್ಲಿ ವಿಫಲವಾಯಿತು.

# ಎಸ್.ಕೆ.ಕರೀಂ ಖಾನ್-ಅಮೃತ ಕಾವ್ಯ ಪ್ರಶಸ್ತಿ ಪ್ರದಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ರಕ್ಷಿದಿಯ ಪೂರ್ಣಚಂದ್ರ ತೇಜಸ್ವಿ ಸಾಂಸ್ಕೃತಿಕ ಕೇಂದ್ರದಲ್ಲಿ ಬೆಳ್ಳೇಕೆರೆ ಜೈ ಕರ್ನಾಟಕ ಸಂಘದಿಂದ ಎಸ್.ಕೆ.ಕರೀಂ ಖಾನ್ ಸೌಹಾರ್ದ ಪ್ರಶಸ್ತಿ ಹಾಗು ಅಮೃತ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

ರಂಗಕರ್ಮಿ ಪ್ರಸಾದ್ ರಕ್ಷಿದಿ ಮಾತನಾಡಿ, ಬೆಳ್ಳೇಕೆರೆ ಜೈ ಕರ್ನಾಟಕ ಸಂಘ ಕಳೆದ 47 ವರ್ಷಗಳಿಂದ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಲವು ಕಾರ್ಯಕ್ರಮ ಮಾಡುತ್ತಿದೆ. ಕಲೆ, ಸಾಹಿತ್ಯ, ರಂಗಭೂಮಿ, ಸಾಕ್ಷರತೆ, ಆರೋಗ್ಯ, ಕೃಷಿ ಮತ್ತು ಪರಿಸರ ಸಂರಕ್ಷಣೆಯಂತಹ ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಚಾರ ಎಂದರು.

ಸಕಲೇಶಪುರದ ಹೆಮ್ಮೆಯ ಜಾನಪದ ಜಂಗಮ ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರದ ವಿಶಿಷ್ಟ ಸಾಧಕ ಎಸ್.ಕೆ. ಕರೀಂಖಾನ್ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಸೌಹಾರ್ದ ಪ್ರಶಸ್ತಿ ಸಮಾಜದಲ್ಲಿ ಸಾಂಸ್ಕೃತಿಕ ಏಕತೆಯನ್ನು ಬಲಪಡಿಸುವ ಪ್ರಯತ್ನವಾಗಿದೆ ಎಂದು ಹೇಳಿದರು.

ಈ ಸಾಲಿನ ಎಸ್.ಕೆ. ಕರೀಂಖಾನ್ ಸೌಹಾರ್ದ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ ಅಚ್ಯುತ ಕೆ.ಜಿ.ಎಫ್ ಅವರಿಗೆ ಪ್ರದಾನ ಮಾಡಲಾಯಿತು. ಅಮೃತಾ ರಕ್ಷಿದಿ ಅವರ ಸ್ಮರಣಾರ್ಥ ನೀಡಲಾಗುವ ಅಮೃತ ಕಾವ್ಯ ಪ್ರಶಸ್ತಿಯನ್ನು ಹಾವೇರಿ ಜಿಲ್ಲೆಯ ಮಧು ಕಾರಗಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿನಯ್ ಗುಂಟೆ ಅವರಿಗೆ ನೀಡಲಾಯಿತು.

ಅಧ್ಯಕ್ಷತೆಯನ್ನು ಕ್ಯಾಮನಹಳ್ಳಿ ಪಂಚಾಯಿತಿ ಅಧ್ಯಕ್ಷ ಎಂ.ಜೆ.ಮಲ್ಲೇಶ್ ವಹಿಸಿದ್ದರು. ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್, ರಂಗ ನಿರ್ದೇಶಕ, ಹೆಗ್ಗೋಡು ಮಾಜಿ ಪ್ರಾಂಶುಪಾಲ ಕೆ.ಜಿ.ಮಹಾಬಲೇಶ್ವರ್, ಕೆ.ಎಂ.ಸಿ. ಮಣಿಪಾಲದ ವಾಕ್ ಶ್ರವಣ ತಜ್ಞ ಡಾ. ಕಿಶನ್, ಉದ್ಯಮಿಗಳಾದ ಕೆ.ಎಸ್.ಪವನ್ ಕುಮಾರ್, ಸೋಮಣ್ಣ ಹಾಜರಿದ್ದರು.

ಕವಿ ಸುಬ್ಬು ಹೊಲೆಯಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕವಿತಾ ಸುಬ್ಬಯ್ಯ, ಮಾಲಿನಿ ವಿಶ್ವನಾಥ್, ಪತ್ರಕರ್ತ ಹೆತ್ತೂರು ನಾಗರಾಜ್, ಸತೀಶ್ ಬೆಳ್ಳೇಕೆರೆ, ಕೆ.ಎಸ್.ರಾಜಶೇಖರ್, ಎಸ್.ಕೆ. ಕರೀಂ ಖಾನ್ ಕುಟುಂಬದ ತೌಫಿಕ್ ಅಹಮದ್, ತನ್ವಿರ್ ಅಹಮದ್ ಉಪಸ್ಥಿತರಿದ್ದರು.

# ರಾಗಿ ಖರೀದಿ: 46 ಸಾವಿರ ರೈತರಿಂದ ನೋಂದಣಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾದ್ಯಂತ ಬೆಂಬಲ ಬೆಲೆಯಡಿ ರಾಗಿ ಖರೀದಿ ಪ್ರಕ್ರಿಯೆ ಆರಂಭವಾಗಿದ್ದು, ಈ ವರೆಗೆ 46,258 ರೈತರು ನೋಂದಾಯಿಸಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ನಗರದ ಎಪಿಎಂಸಿಗೆ ಸೋಮವಾರ ಭೇಟಿ ನೀಡಿದ್ದ ಅವರು ಖರೀದಿ ಕೇಂದ್ರದ ವ್ಯವಸ್ಥೆ ಪರಿಶೀಲಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿ ಒಟ್ಟು 26 ರಾಗಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಸಕಲೇಶಪುರ ಮತ್ತು ಆಲೂರಿನಲ್ಲಿ ರೈತರು ನೋಂದಾಯಿಸದ ಹಿನ್ನಲೆಯಲ್ಲಿ 24 ಕೇಂದ್ರಗಳಲ್ಲಿ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಪ್ರತಿ ರೈತರಿಂದ ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಟ 50 ಕ್ವಿಂಟಾಲ್ ವರೆಗೆ 4286 ರೂ.ನಂತೆ ಖರೀದಿಸಲಾಗುತ್ತಿದೆ. ಮಾರ್ಚ್ ಅಂತ್ಯದ ವರೆಗೆ ನೋಂದಣಿ ಹಾಗೂ ಖರೀದಿಗೆ ಅವಕಾಶ ನೀಡಲಾಗಿದೆ. ಜಿಲ್ಲೆಯಲ್ಲಿ ಈ ವರೆಗೆ 46,258 ರೈತರು ನೋಂದಾಯಿಸಿಕೊಂಡಿದ್ದು, 10,85,494.50 ಕ್ವಿಂಟಾಲ್ ರಾಗಿ ಖರೀದಿಗೆ ನೋಂದಣಿ ಮಾಡಲಾಗಿದೆ ಎಂದರು.

ಇದುವರೆಗೆ 240 ರೈತರಿಂದ 64,728 ಕ್ವಿಂಟಾಲ್ ಖರೀದಿ ಮಾಡಲಾಗಿದೆ. ಗುಣಮಟ್ಟದ ರಾಗಿ ಖರೀದಿಗೆ ಎಲ್ಲಾ ಕೇಂದ್ರಗಳಲ್ಲಿ ಸ್ವಚ್ಛತಾ ಕ್ರಮ ಕೈಗೊಳ್ಳಲಾಗಿದೆ. ರೈತರ ಜೇಷ್ಠತೆ ಆಧಾರದ ಮೇಲೆ ಎರಡು ದಿನ ಮುಂಚಿತವಾಗಿ ದೂರವಾಣಿ ಮೂಲಕ ಮಾಹಿತಿ ನೀಡಿ ಪದಾರ್ಥ ತರಲು ಅವಕಾಶ ಕಲ್ಪಿಸಲಾಗುತ್ತಿದೆ. ತೂಕದಲ್ಲಿ ಮೋಸವಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಸಮಸ್ಯೆಗಳು ಕೇಳಿಬಂದ ಹಿನ್ನಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚಿಸಲಾಗಿದೆ. ಈ ಸಮಿತಿಯಲ್ಲಿ ಉಪ ತಹಸೀಲ್ದಾರ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು, ಆಹಾರ ಇಲಾಖೆ ಅಧಿಕಾರಿಗಳು ಹಾಗು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿಗಳು ಕಾರ್ಯನಿರ್ವಹಿಸಲಿದ್ದಾರೆ ಎಂದರು.

ರೈತರಿಂದ ಖರೀದಿಸಿದ ರಾಗಿಯನ್ನು ಜರಡಿ ಮೂಲಕ ಸ್ವಚ್ಛಗೊಳಿಸಿ, ಸರ್ಕಾರ ನೀಡಿರುವ 50 ಕೆ.ಜಿ. ಗೋಣಿ ಚೀಲಗಳಲ್ಲಿ ತುಂಬಿಸಿ ರಾಜ್ಯ ಉಗ್ರಾಣ ನಿಗಮಗಳಿಗೆ ರವಾನೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಖರೀದಿಸಿದ ರಾಗಿಯನ್ನು ಒಟ್ಟು ಏಳು ಉಗ್ರಾಣ ಕೇಂದ್ರಗಳಲ್ಲಿ ಸಂಗ್ರಹಿಸಲಾಗುತ್ತಿದ್ದು, ಲಾರಿಗಳ ಓಡಾಟವನ್ನು ಜಿಪಿಎಸ್ ಮೂಲಕ ಪರಿಶೀಲಿಸಲಾಗುತ್ತಿದೆ. ರಾಗಿಯ ತೇವಾಂಶವನ್ನು ಸ್ನೇಹ ಲ್ಯಾಬೋರೇಟರೀಸ್ ಮೂಲಕ ಪರೀಕ್ಷಿಸಿ ಗುಣಮಟ್ಟ ಖಚಿತಪಡಿಸಿಕೊಂಡ ನಂತರ ಖರೀದಿ ಮಾಡಲಾಗುತ್ತಿದೆ. ರೈತರಿಗೆ 15 ದಿನಗಳೊಳಗೆ ಡಿಬಿಟಿ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗುವುದೆಂದು ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಅರುಣ್ ಕುಮಾರ್ ಸಂಗಾವಿ, ಆಹಾರ ನಿಗದಮ ವ್ಯವಸ್ಥಾಪಕಿ ಅನುರಾಧಾ, ಎಪಿಎಂಸಿ ಕಾರ್ಯದರ್ಶಿ ಮಧು ಇತರರಿದ್ದರು.



### ಹಮಾಲಿಗಳ ಯೋಗ ಕ್ಷೇಮ ವಿಚಾರ

ರಾಗಿ ಸ್ವಚ್ಛಗೊಳಿಸುವ ಜರಡಿಗೆ ತಾವೇ ರಾಗಿ ಹಾಕುವ ಮೂಲಕ ಕಾರ್ಯವಿಧಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ನಂತರ ತೂಕದ ಪ್ರಕ್ರಿಯೆಯನ್ನು ಅರಿತರು. ಜೊತೆಗೆ ವಾಹನಗಳಿಂದ ರಾಗಿ ಚೀಲ ಹೊತ್ತು ತರುತ್ತಿದ್ದ ಹಮಾಲಿಗಳ ಉಭಯ ಕುಶಲೋಪರಿ ವಿಚಾರಿಸಿದರು. ರಾಗಿ ಮಾರಾಟಕ್ಕೆ ಬಂದಿದ್ದ ರೈತರ ಅಹವಾಲು ಆಲಿಸಿದರು

# ವಿಶ್ವಕ್ಕೆ ಶಾಂತಿ ಸಂದೇಶ ಸಾರಿದ ರೇಣುಕಾಚಾರ್ಯರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಜಗದ್ಗುರು ಶ್ರೀ ರೇಣುಕಾಚಾರ್ಯರ ಸಂದೇಶವು ಇಂದಿನ ಅಶಾಂತಿಯ ಜಗತ್ತಿಗೆ ಅತ್ಯಂತ ಅವಶ್ಯಕವಾಗಿದೆ ಎಂದು ಶಾಸಕ ಸಿ.ಎನ್ .ಬಾಲಕೃಷ್ಣ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗೂ ವೀರಶೈವ ಸಮಾಜದ ವತಿಯಿಂದ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೋತ್ಸವದಲ್ಲಿ ಮಾತನಾಡಿದ ಅವರು, ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಅವರ ತತ್ವಗಳು ಆದರ್ಶವಾಗಿವೆ ಎಂದರು.

ಇಂದಿನ ದಿನಗಳಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧ ಮತ್ತು ಹಿಂಸೆಯ ವಾತಾವರಣವು ಆತಂಕಕಾರಿಯಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಶಾಂತಿ ಮಂತ್ರ ಮತ್ತು ರೇಣುಕಾಚಾರ್ಯರ ತತ್ವಗಳು ಜಗತ್ತಿಗೆ ದಾರಿ ದೀಪವಾಗಲಿ ಎಂದರು.

ರೇಣುಕಾಚಾರ್ಯರು ಅಂದಿನ ಕಾಲದಲ್ಲೇ ಮಹಿಳೆಯರಿಗೆ ಸಮಾನ ಗೌರವ ನೀಡಿದ್ದರು. ಅವರು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ. ದಯೆ, ಕರುಣೆ, ಅಹಿಂಸೆ ಮತ್ತು ಸತ್ಯದ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ, ಹಿಂದಿನ ಕಾಲದಲ್ಲಿ ಮಹಾನ್ ಪುರುಷರು ಸಮಾಜದ ಉನ್ನತಿಗಾಗಿ ಶ್ರಮಿಸಿದ್ದಾರೆ ಎಂದು ವರ್ಣಿಸಿದರು.

ಸಮಾನತೆ, ಮನುಕುಲದ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿ ಇರಿಸಿದ್ದಾರೆ. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ಸಾಗಬೇಕಿದೆ ಎಂದು ಸಲಹೆ ನೀಡಿದರು.

ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಸ್ವಾಮೀಜಿ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ತಮ್ಮ ವಚನಗಳಲ್ಲಿ ಮತ್ತು ಬಸವಾದಿ ಶರಣರು ವಚನ ಸಾಹಿತ್ಯದ ಮೂಲಕ ಜನರಿಗೆ ಸರಿಮಾರ್ಗ ತೋರಿದ್ದಾರೆ. ಮನೆಯಲ್ಲಿ ತಾಯಂದಿರು ಮಕ್ಕಳಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಹೇಳಲೇಬೇಕು ಎಂದರು.

ಪಾಲಕರು ಒಳ್ಳೆಯ ವಿದ್ಯಾಭ್ಯಾಸದ ಜೊತೆಗೆ ಒಳ್ಳೆಯ ಸಂಸ್ಕೃತಿ ಕೂಡ ಕೊಡಬೇಕು. ಮನುಷ್ಯ ಜನ್ಮವು ಅತ್ಯಂತ ದುರ್ಲಭವಾದುದು. ಜೀವನದಲ್ಲಿ ಸಾರ್ಥಕತೆ ಪಡೆಯಲು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಪೂಜೆ, ಜಪ ಮತ್ತು ಧ್ಯಾನ ಎಂಬ ಹತ್ತು ಧರ್ಮ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ರಾಜಣ್ಣ, ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ, ತಾಲ್ಲೂಕು ಅಧ್ಯಕ್ಷ ಗಿರೀಶ್, ಉಪ ತಹಶೀಲ್ದಾರ್ ಅನಿಲ್ ಕುಮಾರ್, ಮುಖಂಡರಾದ ಅರ್ಚಕ ಶಿವಾನಂದ್, ತಗಡೂರು ಮಂಜಣ್ಣ, ರುದ್ರೇಶ್, ರಕ್ಷಿತ್ ಇತರರಿದ್ದರು.

# ಮನೆ ಬೀಗ ಮುರಿದು ಬೆಳ್ಳಿ ಆಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬೀಗ ಮುರಿದು ಒಳನುಗ್ಗಿರುವ ಕಳ್ಳರು 42,500 ರೂ. ಮೌಲ್ಯದ ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ಸಾಲಗಾಮೆ ರಸ್ತೆಯ ಮಾವಿನಹಳ್ಳಿ ಗೇಟ್‌ನಲ್ಲಿ ನಡೆದಿದೆ.

ಹೇಮಂತ್ ಕುಮಾರ್ ಅವರು ಮನೆಗೆ ಬೀಗ ಹಾಕಿಕೊಂಡು ತಮ್ಮ ಸಂಬಂಧಿಕರ ಶವ ಸಂಸ್ಕಾರಕ್ಕೆ ಹೋಗಿದ್ದರು.

ವಾಪಾಸ್ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಬೀರುವಿನಲ್ಲಿಟ್ಟಿದ್ದ ಬೆಳ್ಳಿ ಪದಾರ್ಥ ಕಳುವಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಾಳ್ಳುಪೇಟೆಯಲ್ಲಿ ಮಾ. 5ಕ್ಕೆ ಶಿವಕುಮಾರ ಸ್ವಾಮೀಜಿ ಸ್ಮರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ನಡೆದಾಡುವ ದೇವರು, ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಬಾಳ್ಳುಪೇಟೆ ಸ್ನೇಹ ಬಳಗದಿಂದ ಪಟ್ಟಣದ ಬಿ.ಸಿದ್ದಣ್ಣಯ್ಯ ಪ್ರೌಢ ಶಾಲಾ ಆವರಣದಲ್ಲಿ ಮಾ. 5ರ ಗುರುವಾರ ಆಯೋಜಿಸಲಾಗಿದೆ ಎಂದು ಸ್ನೇಹ ಬಳಗದ ಯಡೇಹಳ್ಳಿ ಆರ್. ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಆದಿಚುಂಚನಗಿರಿ ಹಾಸನ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸಂಕಲಾಪುರ ಮಠದ ಧರ್ಮರಾಜೇಂದ್ರ ಸ್ವಾಮೀಜಿ, ಕೊಡ್ಲಿಪೇಟೆ ಕಲ್ಮಠದ ಮಹಾಂತ ಸ್ವಾಮೀಜಿ, ಕಿರಿಕೊಡ್ಲಿಮಠದ ಸದಾಶಿವ ಸ್ವಾಮೀಜಿ, ಹಾಸನ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಮುಖ್ಯ ಭಾಷಣ ಮಾಡಲಿದ್ದಾರೆ. ಶಾಸಕ ಸಿಮೆಂಟ್ ಮಂಜು ಸೇರಿ ಅನೇಕರು ಭಾಗವಹಿಸಲಿದ್ದಾರೆ ಎಂದರು.


ಬೆಳಿಗ್ಗೆ 9 ಗಂಟೆಗೆ ಗ್ರಾಮ ದೇವತೆ ದೇವಿರಮ್ಮ ದೇವಸ್ಥಾನದ ಆವರಣದಿಂದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರದೊಂದಿಗೆ ಪೂರ್ಣಕುಂಭ ಮೆರವಣಿಗೆ ಆರಂಭವಾಗಲಿದೆ. ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಗ್ರಾಮದ ರಾಜ ಬೀದಿಯಲ್ಲಿ ತರೀಕೆರೆಯ ಶ್ರೀ ಗುರುವೀರ ಮಹಿಳಾ ವೀರಗಾಸೆ ಕಲಾ ತಂಡಗಳೊಂದಿಗೆ ಮೆರವಣಿಗೆ ಸಾಗಲಿದೆ. ನಂತರ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ ಎಂದರು.

ಮೆರವಣಿಗೆ ನಂತರ ರಕ್ತದಾನ ಶಿಬಿರ ನಡೆಯಲಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ, ದಾನ-ಧರ್ಮ ಮಾಡಿದವರಿಗೆ ಪುರಸ್ಕಾರ, ಅನಾಥ ಹಾಗು ದಿವ್ಯಾಂಗ ಮಕ್ಕಳನ್ನು ದತ್ತು ಪಡೆದು ಅವರು ಹತ್ತನೇ ತರಗತಿ ಓದುವವರೆಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ನೇಹ ಬಳಗದ ಎಂ.ಎಸ್. ಚಂದ್ರಶೇಖರ್, ನೇತ್ರಾ, ಮಂಜುನಾಥ್, ಬಿ.ಪಿ. ಚಂದ್ರಶೇಖರ್, ಬಿ.ಎನ್. ಪ್ರದೀಪ್ ಕುಮಾರ್ ಹಾಜರಿದ್ದರು.

# ಹಾಸನದಲ್ಲಿ ಉದ್ಯೋಗ ಮೇಳ: 10 ಸಾವಿರ ಜನರಿಗೆ ನೌಕರಿ ವಿಶ್ವಾಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಾ. 7ರ ಶನಿವಾರ ಯುವ ಉದ್ಯೋಗ ಮೇಳ ಹಮ್ಮಿಕೊಂಡಿದ್ದು, ಜಿಲ್ಲೆಯ ವಿದ್ಯಾವಂತರು ಸದುಪಯೋಗ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಕರ್ನಾಟಕ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ವತಿಯಿಂದ ಮೇಳ ಆಯೋಜಿಸಲಾಗಿದೆ. ಹೊರ ರಾಜ್ಯ ಹಾಗೂ ಜಿಲ್ಲೆಗಳಿಂದ ಸುಮಾರು 100 ಕಂಪನಿಗಳು ಸಂದರ್ಶನ ನಡೆಸಲಿದ್ದು, 10 ಸಾವಿರ ಜನರಿಗೆ ಉದ್ಯೋಗ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿದೆ. 850 ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಅಕ್ಕಪಕ್ಕದ ಜಿಲ್ಲೆಯವರು ಭಾಗವಹಿಸಬಹುದು ಎಂದರು. ಕನಿಷ್ಟ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮುಗಿಸಿರುವವರು ತಮ್ಮ ಅಂಕ ಪಟ್ಟಿ, ಆಧಾರ್ ಕಾರ್ಡ್ ಹಾಗೂ ಎರಡು ಭಾವಚಿತ್ರಗಳೊಂದಿಗೆ ಬೆಳಿಗ್ಗೆ 9.30 ರಿಂದ ಸಂಜೆ 5ರ ವರೆಗೆ ನಡೆಯುವ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು.

ಉದ್ಯೋಗಕ್ಕಾಗಿ ಹಂಬಲಿಸುತ್ತಿರುವ ಯುವ ಸಮೂಹ ಪ್ರಯೋಜನ ಪಡೆಯಬೇಕು ಎಂದರು. ಖಾಸಗಿ ಸಂಸ್ಥೆಗಳಲ್ಲಿ ಕೌಶಲಕ್ಕೆ ಆದ್ಯತೆ ನೀಡುತ್ತವೆ. ಸಂದರ್ಶನಕ್ಕೆ ಬರುತ್ತಿರುವ ಕೆಲವು ಕಂಪನಿಯರು ತಾವೇ ತರಬೇತಿ ನೀಡುವುದಾಗಿ ಭರವಸೆ ನೀಡಿದ್ದಾರೆ. ಸಂದರ್ಶನಕ್ಕೆ ಬರುವವರಿಗೆ ಮೂಲಸೌಕರ್ಯ ಕಲ್ಪಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

ಉಪಾಹಾರ, ಕುಡಿಯುವ ನೀರು, ಶೌಚಾಲಯ ಹಾಗು ನೆರಳಿನ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಕಂಪನಿಗೂ ಪ್ರತ್ಯೇಕ ಕೊಠಡಿ ನೀಡಿದ್ದು, ಕಾಲೇಜು ಆವರಣದಲ್ಲಿ ಶಾಮಿಯಾನ ಹಾಕಲಾಗುತ್ತದೆ. ಆಸಕ್ತರು ಮೊ.ಸಂ. 9742871492 ಇಲ್ಲಿಗೆ ಕರೆ ಮಾಡಿ ಅಥವಾ **www.hassanudyogamela.com** ಇಲ್ಲಿಗೆ ಇ-ಮೇಲ್ ಮಾಡುವ ಮೂಲಕ ತಮ್ಮ ವಿವರ ಸಲ್ಲಿಸಬೇಕು. ಎಲ್ಲಾ ಸಂದರ್ಶನಾರ್ಥಿಗಳಿಗೆ ಟೋಕನ್ ಸಂಖ್ಯೆ ನೀಡಲಾಗುತ್ತದೆ ಎಂದು ವಿವರಿಸಿದರು.

# ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ವ್ಯಾಪಕ ವಿರೋಧ

## ಎಐಡಿಎಸ್‌ಓ ನೇತೃತ್ವದಲ್ಲಿ ಸಮಾವೇಶ | ಸರ್ಕಾರದ ನಡೆಗೆ ರೂಪ ಹಾಸನ ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಗ್ರಾಮೀಣ ಪ್ರದೇಶದ ಬಡ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿಸಬೇಕೆಂಬ ದುರುದ್ದೇಶದಿಂದ ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಪ್ರಾರಂಭಿಸುತ್ತಿದೆ ಎಂದು ಲೇಖಕಿ ರೂಪ ಹಾಸನ ಆರೋಪಿಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಸಂಸ್ಥೆಯಿಂದ (ಎಐಡಿಎಸ್‌ಓ) ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿ-ಪೋಷಕರ ಸಮಾವೇಶದಲ್ಲಿ ಮಾತನಾಡಿ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಕೇವಲ ಕೆಪಿಎಸ್ ಮ್ಯಾಗ್ನೆಟ್ ಯೋಜನೆಗೆ ಮಾತ್ರ ಕೆಪಿಎಸ್ ಶಿಕ್ಷಣಕ್ಕೆ ಸಚಿವರಾಗಿದ್ದಾರೆ. ಸರ್ಕಾರಿ ಶಾಲೆ ಎಂದರೆ ಅದು ಒಂದು ಸಾಂಸ್ಕೃತಿಕ ತಾಣ. ಶಾಲೆಯನ್ನು ಮುಚ್ಚಿದರೆ ಅಲ್ಲಿನ ಸಂಸ್ಕೃತಿಯನ್ನು ನಾಶ ಮಾಡಿದಂತಾಗುತ್ತದೆ ಎಂದರು.



ಬಡ ರೈತರ, ಕಾರ್ಮಿಕರ ಮಕ್ಕಳನ್ನು, ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರ ಉಳಿಸುವ ಯೋಜನೆಗೆ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಜಾರಿಗೊಳಿಸಲಾಗಿದೆ. ಸರ್ಕಾರದ ಈ ನೀತಿ ಶಿಕ್ಷಣ ಹಕ್ಕು ಕಾಯ್ದೆಯ ನೇರ ಉಲ್ಲಂಘನೆಯಾಗಿದೆ ಎಂದರು.

ನಾವೆಲ್ಲರೂ ಸೇರಿ ಹೋರಾಟ ಮುಂದುವರಿಸೋಣ, ಬುದ್ಧಿಜೀವಿಗಳು ಮನೆ ಒಳಗೆ ಕೂತರೆ ಕುಳಿತುಕೊಳ್ಳಲಿ, ಸರ್ಕಾರ ಈ ನೀತಿಯನ್ನು ವಾಪಾಸ್ ಪಡೆಯುವವರೆಗೂ ಹೋರಾಟ ಮಾಡಬೇಕಿದೆ. ನಾನು ಕೊನೆಯವರೆಗೂ ನಿಮ್ಮ ಜೊತೆ ಇರುತ್ತೇನೆಂದು ಭರವಸೆ ನೀಡಿದರು. ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅವರು ಮಾತನಾಡಿ, ರಾಜ್ಯದಾದ್ಯಂತ 40,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿ ಬಡ, ರೈತ, ಕೂಲಿ-ಕಾರ್ಮಿಕರ ಮಕ್ಕಳಿಂದ ಶಿಕ್ಷಣವನ್ನು ಸಂಪೂರ್ಣವಾಗಿ ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿದೆ. ರಾಜ್ಯದಲ್ಲಿ 6000 ಗ್ರಾಮ ಪಂಚಾಯಿತಿ ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಯನ್ನಾಗಿ ಪರಿವರ್ತಿಸಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎಐಡಿಎಸ್‌ಓ ಖಂಡಿಸುತ್ತದೆಂದರು.

ಕಳೆದ 15 ವರ್ಷಗಳಲ್ಲಿ ರಾಜ್ಯ ಸರ್ಕಾರದ ವರದಿಯ ಪ್ರಕಾರ 17 ಲಕ್ಷ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇನ್ನೊಂದೆಡೆ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸದೆ, ಪೋಷಕರ ಮೇಲೆ ಆರೋಪ ಮಾಡಲಾಗುತ್ತಿದೆ. ರಾಜ್ಯದಲ್ಲಿ 60,000 ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ, 21,000ಕ್ಕೂ ಹೆಚ್ಚು ಶಾಲೆ ಕಟ್ಟಡಗಳು ದುರಸ್ತಿಗಾಗಿ ಕಾಯುತ್ತಿವೆ. ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಇಲ್ಲದೆ ಸಾವಿರಾರು ಸರ್ಕಾರಿ ಶಾಲೆಗಳು ನಶಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಸರ್ಕಾರ ಶಾಲೆಗಳಿಗೆ ಬೀಗ ಹಾಕುತ್ತಿರುವುದು ಏಕೆ ಎಂದು ಪ್ರಶ್ನಿಸಿದರು.

ಹೋರಾಟಗಾರ ನರಸಿಂಹೇಗೌಡ ಅವರು ಮಾತನಾಡಿ, ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಸಮಾಜಕ್ಕೆ ಬಹಳಷ್ಟು ಮಾರಕ.

ಅದನ್ನು ಅರಿತು ಸರ್ಕಾರ ಪ್ರತಿಯೊಂದು ಮಗುವಿಗೂ ಶಿಕ್ಷಣವನ್ನು ಕೊಡಬೇಕು. ಇಲ್ಲಿಯವರೆಗೆ ಆಡಳಿತ ನಡೆಸಿದ ಮೂರು ಪಕ್ಷದವರು ಕೂಡ ಶಿಕ್ಷಣ, ಜನ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿವೆ. ಇದರ ವಿರುದ್ಧ ಪ್ರಬಲ ಹೋರಾಟ ರೂಪಿಸಬೇಕೆಂದರು. ದಲಿತ ಸಂಘರ್ಷ ಸಮಿತಿಯ ಎಂ.ಬಿ.ಪುಟ್ಟಸ್ವಾಮಿ, ರಾಜ್ಯ ರೈತ ಸಂಘಟನೆ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ, ಸಂವಿಧಾನ ಓದು ಬಳಗ ಸಂಚಾಲಕ ರಾಜು ಗೊರೂರು, ಕೆ.ವಿ.ಭಟ್, ಕಾರ್ಮಿಕ ಮುಖಂಡ ಹನುಮೇಶ್, ಹೆಚ್.ಎಲ್. ನಿರ್ಮಲಾ, ದೇವರಾಜಪುರ ಗ್ರಾಮದ ಸರ್ಕಾರಿ ಶಾಲೆ ಉಳಿಸಿ ಸಮಿತಿ ಅಧ್ಯಕ್ಷ ಮಲ್ಲೇಶ್ ಮಾತನಾಡಿದರು.

### ಶಾಲೆ ಉಳಿವಿಗೆ ಸಮಿತಿ ರಚನೆ

ಸರ್ಕಾರಿ ಶಾಲೆಗಳನ್ನು ಉಳಿಸುವ ಉದ್ದೇಶದಿಂದ ಸಮಿತಿ ರಚಿಸಲಾಗಿದ್ದು ಜಿಲ್ಲಾಧ್ಯಕ್ಷರಾಗಿ ಮಮತಾ, ಕಾರ್ಯದರ್ಶಿಯಾಗಿ ಚೈತ್ರ, ಉಪಾಧ್ಯಕ್ಷ, ಸಂಘಟನೆಗಳ ಮುಖಂಡರು ಹಾಗು ಸದಸ್ಯರ ಆಯ್ಕೆ ಮಾಡಲಾಯಿತು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ, ಉಪಾಧ್ಯಕ್ಷ ಅಭಿಷೇಕ್, ಕಾರ್ಯದರ್ಶಿ ಸುಷ್ಮಾ, ಪದಾಧಿಕಾರಿಗಳಾದ ಪುರುಷೋತ್ತಮ್, ಶ್ರೇಷ್ಠ, ಧನಂಜಯ್ ಧನರಾಜ್, ತಿಲಕ್, ಧನುಶ್ರೀ ಮತ್ತಿತರರಿದ್ದರು.

## ವಿಜಯ ಶಾಲೆಯಲ್ಲಿ ಮಕ್ಕಳಿಗಾಗಿ ಸಂವಿಧಾನ ವಿಶೇಷ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ನಗರದ ವಿಜಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿ ಹಾಸನ್ ಲಿಟರೇಚರ್ ಫೆಸ್ಟಿವಲ್ 2026ರ ಅಂಗವಾಗಿ ಭಾನುವಾರ ಲೇಖಕಿ ವಾಣಿ ಪೆರಿಯೋಡಿ ಅವರು ಮಕ್ಕಳಿಗಾಗಿ ಸಂವಿಧಾನ ವಿಚಾರ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

ಪ್ರೌಢ ಶಾಲಾ ವಿಭಾಗದ 55 ಮಕ್ಕಳು ಭಾಗವಹಿಸಿದ್ದರು. ಸಂವಿಧಾನ ನಮ್ಮ ಜೀವನದಲ್ಲಿ ಹೇಗೆ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಅದನ್ನು ಅಳವಡಿಸಿಕೊಳ್ಳುವ ಬಗೆ ಹೇಗೆ, ಪ್ರಸ್ತುತ ದಿನಗಳಲ್ಲಿ ಭಾರತ ಯಾವ ದಿಕ್ಕಿನಲ್ಲಿ ಸಾಗುತ್ತಿದೆ. ಭವಿಷ್ಯದ ಪ್ರಜೆಗಳು ಮಾಡಬೇಕಿರುವ ಕರ್ತವ್ಯಗಳ ಕುರಿತು ಅವರು ಕೆಲವು ಆಟಗಳ ಮೂಲಕ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ವಾಣಿ ಪೆರಿಯೋಡಿ ಮಾತನಾಡಿ, ದೇಶದ ಸಂಪತ್ತು ಕೆಲವೇ ಜನರ ಕೈಯಲ್ಲಿದೆ. ಬಹುಸಂಖ್ಯಾತ ಜನರು ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಹಾಗು ಸಾಮಾಜಿಕವಾಗಿ ಶೋಷಣೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಯನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಬೇಕೆಂದರು. ಸರ್ವರೂ ಸಮಾನತೆಯಿಂದ ಇರಬೇಕೆಂದು ಸಂವಿಧಾನ ರಚಿಸಲಾಗಿದೆ. ಆದರೆ, ಅದು ಇಂದಿಗೂ ಕಾರ್ಯಗತವಾಗಿಲ್ಲ. ಅದಕ್ಕೆ ಕಾರಣಗಳೇನು ಎಂಬ ಬಗ್ಗೆ ಯಾರೂ ಚಿಂತಿಸುತ್ತಿಲ್ಲ. ವಿದ್ಯಾರ್ಥಿಗಳು ಈಗಿನಿಂದಲೇ ಈ ಬಗ್ಗೆ ಚಿಂತನೆಯಲ್ಲಿ ತೊಡಗಬೇಕೆಂದರು.

ಮಕ್ಕಳ ಸಾಹಿತ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ಪುಸ್ತಕ ಮೇಳದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರು. ಇಷ್ಟದ ಪುಸ್ತಕಗಳನ್ನು ಖರೀದಿಸಿದರು.

## ಮಲ್ಲದೇವರಪುರ ಬೆಟ್ಟದಲ್ಲಿ ಸ್ವಾಧ್ಯಾಯ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವತಿಯಿಂದ ತಾಲ್ಲೂಕಿನ ಮಲ್ಲದೇವರಪುರ ಬೆಟ್ಟದಲ್ಲಿ ಸ್ವಾಧ್ಯಾಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಐತಿಹಾಸಿಕ ಮಲ್ಲೇಶ್ವರಸ್ವಾಮಿ ದೇವಾಲಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿ ಅವರು ರಚಿಸಿದ ಯೇಗ್ದಾಗೆಲ್ಲಾ ಐತೆ ಪುಸ್ತಕದ ಮಂಥನ ನಡೆಯಿತು. ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಸದಸ್ಯರು ಕೃತಿ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅ.ಭಾ.ಸಾ.ಪ. ಸಹ ಕಾರ್ಯದರ್ಶಿ ಮಲ್ಲಿಕಾರ್ಜುನ ಅವರು, ಸಾಹಿತ್ಯದಲ್ಲಿ ಭಾರತೀಯತೆಯನ್ನು ಪ್ರತಿಬಿಂಬಿಸುವ ಉದ್ದೇಶದಿಂದ 1966 ಅ. 27 ರಂದು ಪರಿಷದ್ ಅಸ್ತಿತ್ವ ಪಡೆದಿದೆ. ಹಾಸನದಲ್ಲಿ 2015ರಿಂದ ಸಾಹಿತ್ಯದ ಕಾರ್ಯಕ್ರಮಗಳು ನಡೆಯುತ್ತಿವೆ. ಎಲ್ಲರಲ್ಲೂ ಪುಸ್ತಕ ಓದುವ ಅಭಿರುಚಿ ಬೆಳೆಸಬೇಕು. ಆ ಮೂಲಕ ಸಾಹಿತ್ಯವನ್ನು ಎಲ್ಲರಿಗೂ ತಲುಪಿಸಬೇಕೆಂಬ ಉದ್ದೇಶದಿಂದ ಸ್ವಾಧ್ಯಾಯ ಪರಿಕಲ್ಪನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆಯೆಂದರು.

ಸ್ವಾಧ್ಯಾಯ ಪ್ರಮುಖ್ ಸುನಿತಾದೇವಿ ಪ್ರಸಾದ್ ಮಾತನಾಡಿ, ಯೇಗ್ದಾಗೆಲ್ಲಾ ಐತೆ ಪುಸ್ತಕವು ಸರಳ ಹಾಗೂ ಅರ್ಥಪೂರ್ಣ ಕೃತಿಯಾಗಿದೆ. ಮುಕುಂದೂರು ಸ್ವಾಮೀಜಿ ಅವರು ನೆಲೆಸಿದ್ದ ಈ ಬೆಟ್ಟದಲ್ಲಿಯೇ ಕಾರ್ಯಕ್ರಮ ಹಮ್ಮಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಭಾರತೀಯ ಚಿಂತನೆಗಳನ್ನು ಆಮೂಲಾಗ್ರವಾಗಿ ಪರಿಚಯಿಸುವ ಈ ಪುಸ್ತಕ ಸಾಹಿತ್ಯ ಪ್ರಿಯರಿಗೆ ಖಂಡಿತ ಇಷ್ಟವಾಗುತ್ತದೆ ಎಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಶೃಂಗೇರಿ ವಿಭಾಗ ಸಹ ಸಂಯೋಜಕ ನಾಗೇಂದ್ರ, ಕಟ್ಟೆಮನೆ, ಜಿಲ್ಲಾ ಖಜಾಂಚಿ ಜಯಣ್ಣ ವಂದಿಸಿದರು. ಕಾರ್ಯದರ್ಶಿ ನೇ.ರಾ.ಪ್ರಶಾಂತ್, ಸದಸ್ಯರಾದ ಯೋಗೇಶ್, ನಿರಂಜನ, ನಾಗರಾಜು, ತೋಂಟದಾರ್ಯ, ಲಕ್ಷ್ಮೀ ಮತ್ತಿತರರಿದ್ದರು.

## ಸ್ಕಾಲರ್ಸ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ನಗರದ ಸ್ಕಾಲರ್ಸ್ ಶಾಲೆಯಲ್ಲಿ ಮಕ್ಕಳೇ ತಯಾರಿಸಿದ ವಿಜ್ಞಾನ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಮ ಉದ್ಘಾಟಿಸಿದ ಎಂಸಿಎಫ್ ಹಿರಿಯ ನಿರ್ದೇಶಕ ರಜಿನೀಶ್ ಶರ್ಮ ಮಾತನಾಡಿ, ವಿಜ್ಞಾನ ಮಾದರಿಗಳು ಅನ್ವಯಿಕವಾಗಿರಬೇಕು. ಅವು ಸಮಾಜಕ್ಕೆ ಅನುಕೂಲವಾಗುವ ಸಾಧನಗಳಾಗಿರಬೇಕು. ವಿಜ್ಞಾನದ ಬೆಳವಣಿಗೆಯಿಂದ ದೇಶದ ಪ್ರಗತಿ ಸಾಧ್ಯ. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ವಸ್ತು ಪ್ರದರ್ಶನಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ಸಂಶೋಧನಾ ಕೌಶಲ ಪ್ರೋತ್ಸಾಹಿಸುವ ವೇದಿಕೆಯಾಗಿದೆ ಎಂದರು.



ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ.ರಾಮನ್ ಅವರ ಸ್ಮರಣಾರ್ಥ ಫೆ. 28 ರಂದು ರಾಷ್ಟ್ರೀಯ ವಿಜ್ಞಾನ ದಿನವಾಗಿ ಆಚರಿಸಲಾಗುತ್ತದೆ. ನಿತ್ಯ ಜೀವನದಲ್ಲಿ ವಿಜ್ಞಾನದ ಅವಶ್ಯಕತೆ ಹೆಚ್ಚಿದೆ. ಅದನ್ನು ತಿಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಹೇಳಿದರು.

ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್.ಚಂದ್ರಶೇಖರ್ ಮಾತನಾಡಿ, ಏನಾದರೂ ಸಾಧಿಸಬೇಕೆಂಬ ಹಠ ಇದ್ದರೆ ಮಾತ್ರ ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯ. ಮಕ್ಕಳು ತಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ಇಂತಹ ವೇದಿಕೆಗಳ ಮೂಲಕ ಸಾಬೀತುಪಡಿಸಬೇಕೆಂದು ಸಲಹೆ ನೀಡಿದರು.

## ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಗೆ ಬದ್ಧ: ಕೆಂಚೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಸಕಲೇಶಪುರ: ಪತ್ರಿಕಾ ವಿತರಕರ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರತ ಪತ್ರಕರ್ತರ ಸಂಘ ಸದಾ ಬದ್ಧವಾಗಿದ್ದು, ಅವರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹೇಳಿದರು.



ಪಟ್ಟಣದ ಲಯನ್ಸ್ ಭವನದಲ್ಲಿ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಿಂದ ಆಯೋಜಿಸಿದ್ದ ತಾಲೂಕು ಘಟಕದ ಉದ್ಘಾಟನೆ, ಸದಸ್ಯರಿಗೆ ಗುರುತಿನ ಚೀಟಿ ವಿತರಣೆ ಹಾಗು ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಕಾರ್ಮಿಕ ಇಲಾಖೆಯಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಪತ್ರಿಕಾ ವಿತರಕರು ಪಡೆದುಕೊಳ್ಳಬೇಕು ಎಂದರು.

ಡಿಜಿಟಲ್ ಮಾಧ್ಯಮಗಳ ಪ್ರಾಬಲ್ಯ ಹೆಚ್ಚಾದರೂ ಮುದ್ರಿತ ಪತ್ರಿಕೆಗಳ ಮೇಲಿನ ಓದುಗರ ನಂಬಿಕೆ ಕಡಿಮೆಯಾಗಿಲ್ಲ. ಪತ್ರಿಕೆಯಲ್ಲಿ ಪ್ರಕಟವಾಗುವ ಸುದ್ದಿಗಳು ನಂಬಿಕೆಗೆ ಅರ್ಹವಾಗಿರುತ್ತದೆ. ಆದ್ದರಿಂದ ಜನರು ಪತ್ರಿಕೆಗಳನ್ನು ಇಷ್ಟಪಡುತ್ತಾರೆ ಎಂದರು.

ಇಂದಿನ ದಿನಗಳಲ್ಲಿ ಹಲವಾರು ವಿತರಕರು ಮಾಲೀಕರು ಹಾಗೂ ಸಂಪಾದಕರಾಗಿ ಬೆಳೆಯುತ್ತಿರುವುದು ಗಮನಾರ್ಹ ಬೆಳವಣಿಗೆ. ಸಮಯಕ್ಕೆ ಸರಿಯಾಗಿ ಪತ್ರಿಕೆ ತಲುಪಿಸುವ ಜವಾಬ್ದಾರಿಯನ್ನು ವಿತರಕರು ಶಿಸ್ತಿನಿಂದ ನಿರ್ವಹಿಸುತ್ತಿದ್ದು, ದೇಶವನ್ನು ಕಾಯುವ ಸೈನಿಕರಂತೆ ಸಮಯಪಾಲನೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ಪತ್ರಿಕಾ ವಿತರಕರ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ವಿಶೇಷ ಸಭೆ ನಡೆಸಿ ಸರ್ಕಾರದ ಗಮನಕ್ಕೆ ತರಲಾಗುವುದುಂದು ಭರವಸೆ ನೀಡಿದರು. ವಿತರಕರ ಸಂಘದ ರಾಜ್ಯಾಧ್ಯಕ್ಷ ಶಂಭುಲಿಂಗ ಮಾತನಾಡಿ, ಪತ್ರಿಕಾ ವಿತರಕರು ಸಮಾಜಕ್ಕೆ ಸುದ್ದಿಗಳನ್ನು ತಲುಪಿಸುವ ಪ್ರಮುಖ ಕೊಂಡಿಯಾಗಿದ್ದು, ಅವರ ಹಕ್ಕು-ಹಿತಗಳ ರಕ್ಷಣೆಗೆ ಒಕ್ಕೂಟ ಬದ್ಧವಾಗಿದೆ ಎಂದರು.

ಪತ್ರಿಕಾ ವಿತರಕರು ಅಪಘಾತಗಳಲ್ಲಿ ಮೃತಪಟ್ಟ ಸಂದರ್ಭಗಳಲ್ಲಿ ಸರ್ಕಾರದಿಂದ 2 ಲಕ್ಷ ರೂ. ಪರಿಹಾರ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯೋತ್ಸವ ಸಂದರ್ಭದಲ್ಲಿ ವಿತರಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಪತ್ರಿಕಾ ವಿತರಕರ ಹಿತಕ್ಕಾಗಿ 2018ರಲ್ಲಿ 2 ಕೋಟಿ ರೂ. ಕ್ಷೇಮಾಭಿವೃದ್ಧಿ ನಿಧಿ ಘೋಷಿಸಲಾಗಿದೆಯಾದರೂ ಇನ್ನೂ ಜಾರಿಯಾಗಿಲ್ಲ. ಕನಿಷ್ಟ 10 ಕೋಟಿ ರೂ. ಅನುದಾನ ಮೀಸಲಿಟ್ಟು ಆರೋಗ್ಯ, ಅಪಘಾತ ಹಾಗು ಕುಟುಂಬ ಭದ್ರತಾ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯರವಿ ಮಾತನಾಡಿ, ಪತ್ರಿಕಾ ವಿತರಕರು ಸಮಾಜದ ನಿಜವಾದ ಮೌನ ಯೋಧರಾಗಿದ್ದು, ಮನೆ ಮನೆಗೆ ಪತ್ರಿಕೆ ತಲುಪಿಸುವ ಮೂಲಕ ಜನಜಾಗೃತಿ ಮೂಡಿಸುತ್ತಿದ್ದಾರೆ ಎಂದರು. ಡಿಜಿಟಲ್ ಯುಗದಲ್ಲಿಯೂ ಮುದ್ರಿತ ಪತ್ರಿಕೆಯ ಮಹತ್ವ ಅಚಲವಾಗಿದ್ದು, ನಂಬಿಕೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಮಾಧ್ಯಮವಾಗಿ ಅದು ಮುಂದುವರಿದಿದೆ ಎಂದು ಹೇಳಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಗಿರೀಶ್, ತಾಲೂಕು ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಮಂಜುನಾಥ್ ಮತ್ತಿತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-03

1923: ಟೈಮ್ ವಾರಪತ್ರಿಕೆ ಆರಂಭ, ಅಮೆರಿಕಾದ ಪ್ರಸಿದ್ಧ ವಾರಪತ್ರಿಕೆ ಮೊದಲ ಸಂಚಿಕೆ ಪ್ರಕಟವಾಯಿತು. ಇದು ವಿಶ್ವದ ಪ್ರಮುಖ ಸುದ್ದಿ ಮಾಧ್ಯಮಗಳಲ್ಲಿ ಒಂದಾಗಿದೆ.

1931: ಅಮೆರಿಕದ ರಾಷ್ಟ್ರಗೀತೆ ಘೋಷಣೆ **The Star-Spangled Banner** - ಅನ್ನು ಅಮೆರಿಕದ ಅಧಿಕೃತ ರಾಷ್ಟ್ರಗೀತೆಯಾಗಿ ಅಂಗೀಕರಿಸಲಾಯಿತು. ಈ ಗೀತೆಯನ್ನು ರಚಿಸಿದವರು **Francis Scott Key.**

1878: ಸಾನ್ ಸ್ಟೆಫಾನೊ ಒಪ್ಪಂದ, ರಷ್ಯಾ ಮತ್ತು ಒಟ್ಟೊಮಾನ ಸಾಮ್ರಾಜ್ಯಗಳ ನಡುವೆ ಒಪ್ಪಂದಕ್ಕೆ ಸಹಿ ಮಾಡಲಾಯಿತು.

1918: ಬ್ರೆಸ್ಟ್-ಲಿಟೋವ್ಸ್ಕ ಒಪ್ಪಂದ, ಪ್ರಥಮ ಮಹಾಯುದ್ಧದ ಸಂದರ್ಭದಲ್ಲಿ ರಷ್ಯಾ ಮತ್ತು ಜರ್ಮನಿ ನಡುವೆ ಒಪ್ಪಂದ ನಡೆಯಿತು.

#### ಜನನ

1847: ಅಲೆಕ್ಸಾಂಡರ್ ಗ್ರಾಹಂ ಬೆಲ್, ಟೆಲಿಫೋನ್ ಆವಿಷ್ಕಾರಕ

1933: ಯಶವಂತ್ ಸಿನ್ಹಾ, ಭಾರತದ ಹಿರಿಯ ರಾಜಕಾರಣಿ, ಮಾಜಿ ಕೇಂದ್ರ ಹಣಕಾಸು ಸಚಿವ

#### ಮರಣ

1707: ಔರಂಗಜೇಬ್, ಮೊಘಲ್ ಸಾಮ್ರಾಜ್ಯದ ಶಕ್ತಿಶಾಲಿ ಚಕ್ರವರ್ತಿ

2017: ರೇಮಂಡ್ ಕೊಪಾ, ಫ್ರಾನ್ಸ್ ದೇಶದ ಖ್ಯಾತ ಫುಟ್‌ಬಾಲ್ ಆಟಗಾರ

# ಸಾವಯುವ ಕೃಷಿಯಲ್ಲಿ ಯುವ ರೈತನ ಮೇರು ಸಾಧನೆ

## ಇತರರಿಗೆ ಮಾದರಿಯಾದ ವಗರಹಳ್ಳಿ ಪ್ರವೀಣ್ | ಸಾಲು ಸಾಲು ಪ್ರಶಸ್ತಿಗೆ ಭಾಜನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ಕೈ ಕೆಸರಾದರೆ ಬಾಯಿ ಮೊಸರು ಎಂಬ ಮಾತಿನಂತೆ ಸಾವಯವ ಹಾಗೂ ಸಮಗ್ರ ಕೃಷಿ ಅನುಸರಿಸಿರುವ ರೈತರೊಬ್ಬರು ಇತರರಿಗೆ ಮಾದರಿಯಾಗಿದ್ದಾರೆ.

ವ್ಯವಸಾಯ ಎಂದರೆ ನಷ್ಟದ ಕ್ಷೇತ್ರ ಎಂದು ಭಾವಿಸುವ ಪ್ರಸ್ತುತ ದಿನಗಳಲ್ಲಿ ಅಂತಹ ಅಪವಾದಗಳನ್ನು ದೂರ ಮಾಡಿ ಸತತ ಪರಿಶ್ರಮ, ತಾಳ್ಮೆ ಹಾಗು ವೈಜ್ಞಾನಿಕ ವಿಧಾನಗಳಿಂದ ಯಶಸ್ವಿ ರೈತ ಎನಿಸಿಕೊಂಡಿದ್ದಾರೆ ತಾಲ್ಲೂಕಿನ ವಗರಹಳ್ಳಿ ಗ್ರಾಮದ ಪ್ರವೀಣ್.

ತಮ್ಮ 4 ಎಕರೆ 23 ಗುಂಟೆ ಜಮೀನಿನಲ್ಲಿ 200 ತೆಂಗಿನ ಮರ, 300 ಅಡಿಕೆ, 200 ಬಾಳೆ, ಪಪ್ಪಾಯಿ, ಬಟರ್ ಫ್ರೂಟ್, ಚಕ್ಕೋತ, ನಿಂಬೆ, ಮಾವು, ಮೆಣಸು, ವೀಳ್ಯದೆಲೆ, ನುಗ್ಗೆ, ಏಲಕ್ಕಿ, ಡ್ರಾಗನ್ಸ್ ಫ್ರೂಟ್ಸ್, ನೇರಳೆ, ದಾಳಿಂಬೆ, ಸಪೋಟ ಸೇರಿ ವಿವಿಧ ಬಗೆಯ ಹಣ್ಣು ಹಾಗು ಇತರೆ ಗಿಡಗಳನ್ನು ಬೆಳೆಸಿದ್ದಾರೆ. ಜಮೀನಿನ ಒಂದು ಬದಿಯಲ್ಲಿ ದೊಡ್ಡದಾದ ಕೃಷಿ ಹೊಂಡ ನಿರ್ಮಿಸಿದ್ದು, ಪೈಪ್ ಲೈನ್ ಅಳವಡಿಸಿದ್ದಾರೆ. ಮರ, ಗಿಡ ಹಾಗು ಬೆಳೆಗಳಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆ ಮಾಡಲಾಗಿದೆ. ಉಳುಮೆ ಮಾಡಲು, ತೆಂಗು ಮತ್ತು ಅಡಿಕೆ ಕಾಯಿ ಕೀಳುವ ನಿಟ್ಟಿನಲ್ಲಿ ಯಂತ್ರೋಪಕರಣ ಬಳಸುತ್ತಿದ್ದಾರೆ. ಕಳೆದ 15 ವರ್ಷಗಳಿಂದ ರಾಸಾಯನಿಕ ಗೊಬ್ಬರ ಹಾಗು ಕ್ರಿಮಿನಾಶಕ ಔಷಧಿಯ ಅವಲಂಬನೆ ತಪ್ಪಿಸಿರುವ ಅವರು ಸಾವಯವ ಪದ್ಧತಿ ಮೂಲಕ ಇಳುವರಿ ಪಡೆದು ಲಾಭದತ್ತ ಸಾಗುತ್ತಿದ್ದಾರೆ. ಪ್ರಾರಂಭದಲ್ಲಿ ಕಷ್ಟ ಎನಿಸಿದರು 2-3 ವರ್ಷಗಳ ನಂತರ ಉತ್ತಮ ಪ್ರತಿಫಲ ಸಿಕ್ಕಿದೆ ಎಂದು ಪ್ರವೀಣ್ ಅವರು ಹೇಳುತ್ತಾರೆ.

ಸಾವಯವ ಅಥವಾ ಕೊಟ್ಟಿಗೆ ಗೊಬ್ಬರಕ್ಕಾಗಿ 10



ಹಸು, 2 ಎಮ್ಮೆ ಹಾಗು ಐದಾರು ಕುರಿಗಳನ್ನು ಸಾಕಿದ್ದು ಜೊತೆಗೆ ನೂರಕ್ಕೂ ಹೆಚ್ಚು ನಾಟಿ ಕೋಳಿ ಸಾಕುತ್ತಿದ್ದಾರೆ. ಅದರಿಂದ ತಮ್ಮ ಜಮೀನಿಗೆ ಸಾಕಾಗುವಷ್ಟು ಕೊಟ್ಟಿಗೆ ಗೊಬ್ಬರವನ್ನು ತಾವೇ ಉತ್ಪಾದನೆ ಮಾಡಿಕೊಂಡು ಬೆಳೆಗಳಿಗೆ ಅಗತ್ಯಾನುಸಾರ ನೀಡುತ್ತಿರುವುದು ವಿಶೇಷವಾಗಿದೆ.

2 ಗುಂಟೆ ಜಾಗದಲ್ಲಿ ಕೈ ದೋಟ ಮಾಡಿಕೊಂಡಿದ್ದು ಮನೆಗೆ ಬೇಕಾಗುವಷ್ಟು ಸೊಪ್ಪು ಹಾಗು ತರಕಾರಿ ಪದಾರ್ಥ ಬೆಳೆದುಕೊಳ್ಳುತ್ತಾರೆ. ಕನಕಾಂಬರ, ಮಲ್ಲಿಗೆ, ಸೇವಂತಿಗೆ, ದಾಸವಾಳ, ಗುಲಾಬಿ ಸೇರಿ ಸಾಕಷ್ಟು ಹೂವಿನ ಗಿಡಗಳನ್ನು ಬೆಳೆಸಿರುವುದು ವಿಶೇಷ. ಅಲ್ಲದೆ ಹೈನುಗಾರಿಕೆಯಲ್ಲಿ ತೊಡಗಿರುವ ಅವರು ಹಸು ಹಾಗೂ ಎಮ್ಮೆಗಳಿಗಾಗಿ ವಿವಿಧ ಬಗೆಯ ಮೇವನ್ನು ಸಹ ಬೆಳೆಸಿದ್ದಾರೆ. 10 ಪೆಟ್ಟಿಗೆಗಳನ್ನು ಅಳವಡಿಸಿ ಜೇನು ಕೃಷಿ ಪ್ರಾರಂಭಿಸಿದ್ದಾರೆ. ಅದರಿಂದ ವರ್ಷದಲ್ಲಿ 2 ರಿಂದ 3 ಬಾರಿ ತುಪ್ಪ ಸಂಗ್ರಹವಾಗಲಿದ್ದು ಪ್ರತಿ ಕೆ.ಜಿ.ಗೆ 600 ರಿಂದ 700 ರೂ. ದರ ದೊರೆಯುತ್ತಿದೆ.

### ಮೊಟ್ಟೆಯಿಂದ ನಿರೀಕ್ಷೆಯಂತೆ ಲಾಭ:

ಪ್ರವೀಣ್ ಅವರು ತಮ್ಮ ಜಮೀನಿನಲ್ಲಿರುವ ಹಳೆ ಮನೆಯನ್ನು ನಾಟಿ ಕೋಳಿಗಳ ಸಾಕಾಣಿಕೆಗೆಂದು ಮಾರ್ಪಾಡು ಮಾಡಿಕೊಂಡಿದ್ದು ಸುಮಾರು ನೂರಕ್ಕೂ ಹೆಚ್ಚು ಕೋಳಿಗಳನ್ನು ಸಾಕಿದ್ದಾರೆ. ಪ್ರತಿದಿನ 20 ರಿಂದ 30ಕ್ಕೂ ಹೆಚ್ಚು ಮೊಟ್ಟೆಗಳು ಸಿಗುತ್ತಿದ್ದು, ತಲಾ ಒಂದು ಮೊಟ್ಟೆಗೆ 16 ರಿಂದ 20 ರೂ. ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಕೆಲವು ಬೆಳೆಗಳ ಅವಧಿ ಆಧಾರದ ಮೇಲೆ 1 ತಿಂಗಳು, 3 ತಿಂಗಳು, 6 ತಿಂಗಳು ಹಾಗು ವಾರ್ಷಿಕ ಬೆಳೆಗಳ ಮಾದರಿಯಲ್ಲಿ ಹಂತ ಹಂತವಾಗಿ ಆದಾಯ ಸಿಗುತ್ತಿದ್ದು ಖರ್ಚು ವೆಚ್ಚ ಕಳೆದು ವಾರ್ಷಿಕವಾಗಿ ನಿರೀಕ್ಷೆಗಿಂತ ಹೆಚ್ಚು ಆದಾಯ ಉಳಿಯುತ್ತಿದೆ.

### ಉದ್ಯೋಗ ಅರಸಿ ಮುಂಬೈಗೆ ಪ್ರಯಾಣ:

ಕಳೆದ 15 ವರ್ಷಗಳ ಹಿಂದೆ ಪ್ರವೀಣ್ ಅವರ ತಂದೆ ಸಾಲ ಮಾಡಿ ಕೊಳವೆಬಾವಿ ಕೊರೆಸಿದ್ದು ಕಬ್ಬು ಬೆಳೆ ಮಾಡಿದ್ದರು. ನಿರೀಕ್ಷೆಯಂತೆ ಬೆಲೆ ಸಿಗದ ಕಾರಣ ನಷ್ಟ ಅನುಭವಿಸಿ ಸಾಲ ಹೆಚ್ಚಾಯಿತು. ಅದರಿಂದ ಬೇಸತ್ತು ಪ್ರವೀಣ್ ಅವರು ವ್ಯಾಸಂಗ ಮೊಟಕುಗೊಳಿಸಿ ಸಾಲ ತೀರಿಸುವ ಸಲುವಾಗಿ ಉದ್ಯೋಗ ಅರಸಿ ಬೆಂಗಳೂರಿಗೆ ಹೋಗುತ್ತಾರೆ. ನಿರೀಕ್ಷಿಸಿದಷ್ಟು ಸಂಬಳ ದೊರೆಯದ ಹಿನ್ನಲೆಯಲ್ಲಿ ಮುಂಬೈನತ್ತ ಮುಖ ಮಾಡುತ್ತಾರೆ. ಆದರೂ ಅಲ್ಲಿ ಇರಲಾಗದೆ ಹುಟ್ಟೂರಿಗೆ ವಾಪಾಸ್ಸಾದರು. ನಷ್ಟ ಅನುಭವಿಸಿದ ಜಾಗದಲ್ಲೇ ಲಾಭ ಮಾಡಬೇಕೆಂದು ಹಠ ತೊಟ್ಟ ಅವರು ವೈಜ್ಞಾನಿಕ ಪದ್ಧತಿ ಮೂಲಕ ಅಂದುಕೊಂಡಿದ್ದನ್ನು ಸಾಧಿಸಿದರು.

> ಸಾವಯವ ಹಾಗೂ ಸಮಗ್ರ ಕೃಷಿ ಅನುಸರಿಸಿದರೆ ಮಣ್ಣಿನ ಫಲವತ್ತತೆ ಕಾಪಾಡಬಹುದು. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ಆರೋಗ್ಯವು ಸದೃಢವಾಗಿರುತ್ತದೆ. ಪ್ರಾರಂಭದಲ್ಲೇ ಲಾಭ ಸಿಗಬೇಕೆಂದು ಬಯಸದೆ ಸ್ವಲ್ಪ ತಾಳ್ಮೆ ರೂಢಿಸಿಕೊಂಡರೆ ಇಲ್ಲಿಯೂ ಯಶಸ್ಸು ಸಾಧಿಸಬಹುದು.
>
> **- ಪ್ರವೀಣ್, ಸಾವಯವ ಕೃಷಿಕ**

### ಪ್ರವೀಣ್‌ಗೆ ಒಲಿದ ಪ್ರಶಸ್ತಿಗಳು

ಕೃಷಿ ಕ್ಷೇತ್ರದಲ್ಲಿ ಗುರುತರ ಸಾಧನೆ ಮಾಡಿರುವ ಪ್ರವೀಣ್‌ಗೆ ಹಲವಾರು ಪ್ರಶಸ್ತಿಗಳು ಅರಸಿ ಬಂದಿವೆ. 2013-14ನೇ ಸಾಲಿನಲ್ಲಿ ಬೆಂಗಳೂರು ಜಿಕೆವಿಕೆ ಯುವ ರೈತ ಪ್ರಶಸ್ತಿ ನೀಡಿದೆ. 2015ರಲ್ಲಿ ಬೆಂಗಳೂರಿನಲ್ಲಿ ನಡೆದ ಕೃಷಿ ಮೇಳದಲ್ಲಿ ಜಿಲ್ಲಾ ಮಟ್ಟದ ಪ್ರಗತಿ ಶೀಲ ರೈತ ಪ್ರಶಸ್ತಿ, ಕ್ಯಾನ್ ಬ್ಯಾಂಕ್‌ನಿಂದ ಅತ್ಯುತ್ತಮ ರೈತ ಪ್ರಶಸ್ತಿ, 2016ರಲ್ಲಿ ಕೃಷಿ ಇಲಾಖೆಯ ರಾಗಿ ಬೆಳೆ ಪ್ರಶಸ್ತಿ, 2015ರಲ್ಲಿ ಕೃಷಿ ಇಲಾಖೆ ಆಯೋಜನೆಯಲ್ಲಿ ಶ್ರೇಷ್ಠ ಕೃಷಿಕ ಪ್ರಶಸ್ತಿ, 2017ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವ್ವ ಪ್ರಶಸ್ತಿ ಹಾಗೂ 2023ರಲ್ಲಿ ಕೃಷಿ ಇಲಾಖೆಯಿಂದ ನೇಗಿಲ ಯೋಗಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248